is upgraded as MDR is not yet handed over to PWd by Zilla Panchayat Engineering Division, Belgaum. The road is still under the maintenance of ZPE division, Belgaum and not yet handed over to PWD.

b) Buses and other vehicles can ply on this road except the stretch between Ranakunde to Toorthkunde road (3km) and Baghvade to NH 4A near Desur Railway Station. (4km)

c) No amount has been spent for maintenance and repairs of this road for the year 03-04, 04-05 by PWD since the road was under maintenance of Zilla Panchayat Engineering Division Belgaum.

d) An amount of Rs. 110 lakhs is required for improvement of this entire 11.50 km road.

e) After handing over this road by Zilla Panchayat Engineering Division, Belgaum to PWD the road will be maintained under available annual maintenance grants

5046 (5733) ಶ್ರೀ ನರೇಂದ್ರಬಾಬು. ನೆ.ಲ. (ರಾಜಾಜಿನಗರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ಜಿಲ್ಲೆಯಲ್ಲಿ ಹಾಗೂ ಇತರೆಡೆಗೆ ಎಷ್ಟು ಅನಧಿಕೃತ ಶಾಲೆಗಳನ್ನು ಮುಚ್ಚಲಾಗಿದೆ;

ಆ) ಇಂತಹ ಶಾಲೆಗಳಲ್ಲಿ ಕಲಿಯುತ್ತಿದ್ದ ಎಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ;

ಇ) ಹೀಗೆ ಶಾಲೆಯಿಂದ ಹೊರಬಿದ್ದಿರುವ ಭಾಷಾ ಅಲ್ಪಸಂಖ್ಯಾತರು (ಉರ್ದು/ಮರಾಠಿ/ತೆಲುಗು/ತಮಿಳು/ಮಲೆಯಾಳಂ) ಇವರುಗಳಿಗೆ ಎಂತಹ ಪರ್ಯಾಯ ಶಾಲಾ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸುತ್ತಿದ್ದಾರೆ; (ವಿವರ ನೀಡುವುದು)?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

ಅ) ಬೆಂಗಳೂರು ನಗರಕ್ಕೆ ಇತರೆಡೆ ಒಟ್ಟು 436 ಖಾಸಗಿ ಅನಧಿಕೃತ ಪ್ರಾಥಮಿಕ ಶಾಲೆಗಳನ್ನು ಮತ್ತು 31 ಪ್ರೌಢಶಾಲೆಗಳನ್ನು ಮುಚ್ಚಿಸಲಾಗಿದೆ.

ಆ) ಅನಧಿಕೃತ ಶಾಲೆಗಳನ್ನು ಮುಚ್ಚಿಸಿ ಇಂತಹ ಶಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಹತ್ತಿರದ ಸರ್ಕಾರಿ ಮತ್ತು ಮಾನ್ಯತೆ ಹೊಂದಿದ ಶಾಲೆಗಳಿಗೆ ಪ್ರವೇಶ ನೀಡಲು ಸೂಚನೆಗಳನ್ನು ನೀಡಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಮುಚ್ಚಿಸಿರುವ ಅನಧಿಕೃತ ಶಾಲೆಗಳಲ್ಲಿ ಭಾಷಾ ಅಲ್ಪಸಂಖ್ಯಾತರ ಶಾಲೆಗಳಿರುವುದಿಲ್ಲ.

5047 (5737) ಶ್ರೀ ಪದ್ಮನಾಭ್ ಕೊಟ್ಟಾರಿ ಕೆ. (ವಿಟ್ಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಬಂಟ್ವಾಳ ತಾಲ್ಲೂಕು ವಿಟ್ಲದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ಯಾವ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಯಿತು; ಮೇಲ್ದರ್ಜೆಗೇರಿಸಿದ ನಂತರ ಆರೋಗ್ಯ ಕೇಂದ್ರಕ್ಕೆ ಸೂಕ್ತ ಪ್ರಮಾಣದ ಸವಲತ್ತು ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆಯೇ;